# ಪೊರೆ ಕಳಚಿಕೊಂಡವಳು

ಶೈಲಾ, ಬೆಂಗಳೂರು

ಕಲೆ: ವೆಂಕಟ್ರಮಣ ಭಟ್



"ಇನ್ನೂ ಹೋಮ್‌ವರ್ಕ್ ಮಾಡಿಲ್ವ... ನಾಳೆ ನಾಗಕ್ಕ ಬರ್ಲಿ, ನಿಮ್ಮ ಸೋಮಾರಿತನಕ್ಕೆ ಮದ್ದು ಅರೀಲಿಕ್ಕೆ ಹೇಳ್ತೇನೆ."

ಅಮ್ಮನ ಮಾತು ಕೇಳಿ, ಪಾರುವಿಗೆ ಭಯದಿಂದ ಉಚ್ಚೆ ಬರುವಂತಾಯಿತು. ಪಕ್ಕದಲ್ಲಿದ್ದ ದೊಡ್ಡಪ್ಪನ ಮಗ ಚೇತುವಿನ ಕಡೆ ತಿರುಗಿದಳು. ಬರೆಯುವುದರ ಕಡೆ ಗಮನ ಕೊಡದೆ, ಮೂಗಿಗೆ ಪೆನ್ಸಿಲ್ ಹಾಕಿ ತಿರುವುತ್ತ, ಮಾಡಿನ ಹೆಂಚಿನಲ್ಲಿ ಹಲ್ಲಿ, ಕೀಟದ ಬೇಟೆಯಾಟವನ್ನೇ ದಿಟ್ಟಿಸುತ್ತಿದ್ದ ಅವನು ನಿರ್ಮಲ ಚಿಕ್ಕಿಯ ಮಾತು ಕೇಳಿಸಿಕೊಂಡಿದ್ದೇ ತಡ, ಮೈ ಮೇಲೆ ಹಾವು ಬಿದ್ದವನಂತೆ ಹೆದರಿ, ಪಾರುವನ್ನು ನೋಡಿ, ತಕ್ಷಣ, ಗಾಬರಿಯಿಂದ ತನ್ನ ಚಡ್ಡಿಯೊಳಗೆ ಕೈ ಹಾಕಿ, ತೊಡೆಗಳನ್ನೊಮ್ಮೆ ಸವರಿಕೊಂಡ. ಅಂದು ನಾಗಕ್ಕ ಗಿಂಡಿದ ಗಾಯ ಮಾಯವಾಗಿದ್ದರೂ ಇಂದಿಗೂ ಒಮ್ಮೊಮ್ಮೆ ಆ ಘಟನೆ ಕನಸಿನಲ್ಲಿ ಕಾಡಿ, ಅವನು ಹಾಸಿಗೆ ಒದ್ದೆ ಮಾಡುತ್ತಿದ್ದುದುಂಟು. ಅದಕ್ಕೆ ಕಾರಣ, ಗಾಯದ ದೆಸೆಯಿಂದ ವಾರಪೂರ್ತಿ ನರಳಿದ್ದೋ ಅಥವಾ ದಟ್ಟವಾಗಿ ಕಾಡಿಗೆ ಹಚ್ಚಿದ ಆಕೆಯ ದೊಡ್ಡ ದೊಡ್ಡ ಕಣ್ಣುಗಳು ಹುಟ್ಟಿಸುತ್ತಿದ್ದ ಭಯವೋ... ಎಂಬುದು ಅವನಿಗಿನ್ನೂ ಅರ್ಥವಾಗಿಲ್ಲ. ಆದರೆ, ಇಂದಿಗೂ ನಾಗಕ್ಕನ ಹೆಸರು ಕಿವಿಗೆ ಬಿದ್ದೊಡನೆ ಕೈ ತಾನೇ ತಾನಾಗಿ ತೊಡೆಯ ಕಡೆ ಸರಿಯುವುದಂತು ನಿಜ. ಚೇತು ತೊಡೆ ಸವರಿಕೊಂಡದ್ದನ್ನು ಕಂಡೊಡನೆ ಅವನೊಳಗಿನ ದಿಗಿಲು ಪಾರುವಿಗೂ ಅರ್ಥವಾಯಿತು. ಅವಳೂ ಆ ದಿನವನ್ನು ಮರೆತಿದ್ದರೆ ತಾನೆ.

"ಅವರಿಬ್ಬರು ಎಲ್ಲೋ? ಕರ್ಕೊಂಡು ಬಾ. ಎಲ್ರೂ ಬೇಗ ಹೋಮ್‌ವರ್ಕ್ ಮುಗಿಸಿ. ಕತ್ತಲಾದ್ಮೇಲೆ ಈ ಹಾಳಾದ ಕರೆಂಟಿನದ್ದು ಧೈರ್ಯ ಇಲ್ಲ. ನಾಲ್ಕೂ ಜನ ರಾತ್ರಿ ಊಟ ಆದ್ ಕೂಡ್ಲೆ ಮಲಗಿ ಬಿಡಿ. ನಮಗಿನ್ನೂ ನಾಳೆಯ ಪೂಜೆಯ ತಯಾರಿ ಮಾಡುವುದಿದೆ, ನೀವು ಎಚ್ಚರವಿದ್ದು ತೊಂದರೆ ಕೊಡುವುದು ಬೇಡ, ತಿಳಿಯಿತಾ?" ಎನ್ನುತ್ತಾ ಅಡುಗೆ ಕೋಣೆಯೆಡೆ ನಡೆದಳು ನಿರ್ಮಲ.

ಚಿಕ್ಕಿ ಒಳಗೆ ಹೋಗುತ್ತಲೇ, ಚೇತು, "ಪಾರೂ, ನಾನು ಪಕ್ಕ ಕಣೇ... ಇವತ್ತು ಮತ್ತೆ ಹಾಸಿಗೆ ಒದ್ದೆ ಮಾಡ್ತೆ, ಗ್ಯಾರಂಟಿ. ನೀನು, ಸಚ್ಚಿ ಅಣ್ಣ, ಗೋಪು ಎಲ್ರೂ ಸ್ವಲ್ಪ ದೂರ ಮಲಗಿ ಆಯ್ತು. ಮೊದ್ಲೆ ಹೇಳ್ತಿದ್ದೀನಿ ಕೇಳ್ಕೊ" ಎಂದ ನಡುಗುವ ಸ್ವರದಲ್ಲಿ.

ಮಕ್ಕಳಿಬ್ಬರ ಭಯ ಕಂಡು ಮನೆಯ ಮಾಡು ಕೂಡ ಹೆದರಿ ನಡುಗಿತೋ ಏನೋ, ಇನ್ನೇನು ಬೇಟೆಯ ಮೇಲೆ ಅಂತಿಮ ಆಕ್ರಮಣಕ್ಕೆ ಸಜ್ಜಾಗಿದ್ದ ಹಲ್ಲಿ ಆಯತಪ್ಪಿ ಪಾರುವಿನ